ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ

**ಸಿಸಿ ಸಂಃ 3741/2022**

| | | |
|---|---|---|
| ಸಾಕ್ಷಿಯ ಹೆಸರುಃ | ಸೋಮೇಗೌಡ | ಫ್ರಾಸಾಃಃ 7 |
| ತಂದೆ ಹೆಸರುಃ | ಕಾಳೇಗೌಡ | ಚಾಸಾಃಃ 5 |
| ವಯಸ್ಸುಃ | 65 ವರ್ಷ | ಪ್ರಮಾಣೀಕರಿಸಿದ ದಿಃ 17.09.2025 |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ನವಿಲೂರು ಗ್ರಾಮ | |

ಮುಖ್ಯ ವಿಚಾರಣೆಃ ಸಸಅ ರಿಂದಃ

1. ಸಾಕ್ಷಿಯು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುಸಿರುತ್ತಾರೆ. ಮಹಜರನ್ನು ಈಗಾಗಲೇ ನಿಪಿ - 2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ - 2(ಸಿ) ಎಂದು ಗುರುತಿಲಾಯಿತು. ನಿಪಿ - 2 ಕ್ಕೆ ನಾನು ದಿಃ 26.04.2022 ರಂದು ಪೊಲೀಸರು ಅಪಘಾತವಾದ ಸ್ಥಳವಾದ ವಿರುಪಾಕ್ಷರವರ ತೋಟದ ಬಳಿ ಮಹಜರ್ ಮಾಡಲು ಬಂದಾಗ ಸಹಿ ಮಾಡಿರುತ್ತೇನೆ. ಪೊಲೀಸ ಸ್ಥಳದಲ್ಲಿ ಇದ್ದ ಒಂದು ಸ್ಕೂಟರನ್ನು ಹಾಗೂ ಒಂದು ಮಾರುತಿ ಕಾರನ್ನು ತೆಗೆದುಕೊಂಡು ಹೋದರು. ಅವುಗಳ ನಂಬರ್ ನನಗೆ ನೆನಪಿಲ್ಲ. ಮಹಜರ್ ಸಮಯದಲ್ಲಿ ಚಾಸಾ - 6 ಮತ್ತು 2 ರವರು ಸಹ ಇದ್ದರು. ಮಹಜರನ್ನು ಸಂಜೆ 5-30 ರಿಂದ 6-30 ಗಂಟೆಯವರೆಗೆ ಮಾಡಿರುತ್ತಾರೆ.
2. ಸಾಕ್ಷಿ ಫೋಟೋಗಳಿರುವ ಎರಡು ಹಾಳೆಗಳನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋಗಳಲ್ಲಿರುವ ವಾಹನಗಳನ್ನು ಅಮಾನತುಪಡಿಸಿಕೊಡಿರುವುದಾಗಿ ನುಡಿಯುತ್ತಾರೆ. ಸದರಿ ಹಾಳೆಗಳನ್ನು ನಿಪಿ - 14 ಮತ್ತು 15 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

1. ಮಹಜರ್ ಮಾಡಲು ನನಗೆ ಪೊಲೀಸರು ನೊಟೀಸು ನೀಡಿಲ್ಲ.
2. ಮಹಜರ್ ನಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ.
3. ಮೃತ ಮೈಲಾರಿಗೌಡರು ಹಾಗೂ ನಾನು ಸಂಬಂಧಿಕರು ಎಂದರೆ ಸರಿ.
4. ವಶಪಡಿಸಿಕೊಂಡ ವಾಹನಗಳ ಮೇಲೆ ನನ್ನ ಸಮಕ್ಷಮ ವಿಶೇಷ ಗುರುತು ಮಾಡಿಲ್ಲ.
5. ಮಹಜರಿಗೆ ಪೊಲೀಸರ ಕೋರಿಕೆಯ ಮೇಲೆ ಸಹಿ ಹಾಕಿದ್ದೀರಾ ಎಂದರೆ ಸರಿ.
6. ಚಾಸಾ- 1 ರವರ ಮಾತು ಕೇಳಿ ನಾನು ನಿಪಿ 2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ.

7. ಪೊಲೀಸರು ಯಾವುದೇ ಸ್ಥಳಕ್ಕೆ ಬಂದಿಲ್ಲ ಹಾಗೂ ನಿಮ್ಮ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಸ್ಥಳದಿಂದ ಯಾವುದೇ ವಾಹನಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ